ದಿನಾಂಕ: **19.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುರೆದ ಪಾಟೀ ಸವಾಲು ವಾದಿ ಪರ ಶ್ರೀ ಡಿ ಸಿ ಎಂ ವಕೀಲರಿಂದಃ-

(ಸಾಕ್ಷಿಗೆ ಕನ್ನಡ ಭಾಷೆ ಬರದೇ ಇದ್ದ ಕಾರಣ ಶ್ರೀ.ಸಿ.ಕೆ.ಸುಧಾಕರ್ (ಕೆಎಆರ್ 101/2014) ವಕೀಲರನ್ನು ಭಾಷಾಂತರಗಾರರರಾಗಿ ನೇಮಿಸಿಕೊಳ್ಳಲಾಯಿತು)

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಯಾರು ಬರೆಸಿ ಹಾಕಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿ ತುಂಬಾ ದಿನ ಆಗಿರುವುದರಿಂದ ಅದರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ನಾರಾಯಣಪ್ಪನಿಗೆ ಮುನಿಶಾಮಪ್ಪ, ಲಕ್ಷ್ಮಮಯ್ಯ ಎಂಬ ಇಬ್ಬರು ಅಣ್ಣತಮ್ಮಂದಿರು ಇದ್ದರು. ಸದರಿಯವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ವಿಭಾಗದಲ್ಲಿ ಭಾಗ ಬಂದಿರುತ್ತದೆ. ನನ್ನ ತಂದೆಗೆ ಭಾಗದಲ್ಲಿ ಬಂದ ಆಸ್ತಿಯಲ್ಲಿ ನಮ್ಮ ಕುಟುಂಬದವರೇ ಇದ್ದಾರೆ ಎಂದರೆ ಸರಿ. ಹಾಗೆಯೇ ಮುನಿಶಾಮಪ್ಪ ಮತ್ತು ಲಕ್ಷ್ಮಮಯ್ಯನವರ ಭಾಗಕ್ಕೆ ಬಂದ ಆಸ್ತಿಗಳಲ್ಲಿ ಅವರವರ ಕುಟುಂಬದವರೇ ಬೆಳೆ ಇಟ್ಟಿಕೊಂಡು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿ ಮತ್ತು ಅವರವರೇ ಕಂದಾಯವನ್ನು ಕಟ್ಟುತ್ತಿದ್ದರು ಎಂದರೆ ಸರಿ. ಸುಮಾರು 50 ವರ್ಷಗಳ ಹಿಂದೆ ವಿಭಾಗ ಆಗಿರುತ್ತದೆ. ನನ್ನ ತಂದೆಗೆ ಚಿಕ್ಕನಾರಾಯಣಪ್ಪ, ಪಾರ್ವತಮ್ಮ, ವಾದಿ, ವೆಂಕಟೇಶಪ್ಪ, ರತ್ನಮ್ಮ ಎಂಬ ಐದು ಜನ ಮಕ್ಕಳು.

(ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಮುಂದೂಡಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.